ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಮಂತ್ರಿಗಳು) :

ಅ) ಹೌದು.

ಆ) ರಾಜ್ಯ ಸರ್ಕಾರವು ಈ ಗಿರಣಿಯನ್ನು ಗುತ್ತಿಗೆ ನೀಡಲು ತೀರ್ಮಾನಿಸಿ ದಿ: 27-6-98 ರಂದು ಆದೇಶವನ್ನು ಹೊರಡಿಸಲಾಗಿತ್ತು. ಈ ಸಂಬಂಧ ಗಿರಣಿಯ ಪುನರ್ ಪ್ರಾರಂಭಕ್ಕಾಗಿ ರೂ.50.00 ಲಕ್ಷಗಳ ಶೇರು ಬಂಡವಾಳವನ್ನು ಮಂಜೂರು ಮಾಡಲು ಮತ್ತು ರಾಯಚೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ರೂ.30.00 ಲಕ್ಷ ಸಾಲ ಪಡೆಯಲು ತೀರ್ಮಾನಿಸಲಾಗಿತ್ತು. ರಾಜ್ಯ ಸರ್ಕಾರವು ರೂ.25.00 ಲಕ್ಷಗಳ ಶೇರು ಹಣವನ್ನು ಮೊದಲನೇ ಕಂತಾಗಿ ಬಿಡುಗಡೆ ಮಾಡಿತ್ತು. ಆದರೂ ಗಿರಣಿಯನ್ನು ಗುತ್ತಿಗೆ ಆಧಾರದ ಮೇಲೆ ನೀಡಲಾಗದೆ ಪುನಃ ಪ್ರಾರಂಭವಾಗಲಿಲ್ಲ. ಪ್ರಸ್ತುತ ರಾಜ್ಯ ಸರ್ಕಾರವು ಈ ಗಿರಣಿಯ ಬಗ್ಗೆ ಸಿಟ್ರಾ ಸಂಸ್ಥೆಯಿಂದ ಅಧ್ಯಯನ ಮಾಡಿಸಿ ವರದಿ ಪಡೆಯಲು ತೀರ್ಮಾನಿಸಿದೆ.

ಇ) ಸಿಟ್ರಾ ಸಂಸ್ಥೆಯಿಂದ ವರದಿ ಪಡೆದು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

2688 (3054) ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) :- ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸತತ ಬರಗಾಲದಿಂದ 2004-05ನೇ ಸಾಲಿಗೆ ಹಿರೇಕೆರೂರು ತಾಲ್ಲೂಕಿನಲ್ಲಿ ಜಾನುವಾರುಗಳ ಮೇವಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮೇವಿನ ಕೊರತೆ ನೀಗಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುತ್ತದೆ;

ಇ) ಹಿರೇಕೆರೂರು ತಾಲ್ಲೂಕಿನ ಎತ್ತಿನಹಳ್ಳಿ ಎಂ.ಕೆ. (2) ಕಂಚೂರು (3) ಹಳ್ಳೂರು (4) ಮಡ್ಲೂರು ಗ್ರಾಮಗಳಲ್ಲಿನ ಪಶು ಚಿಕಿತ್ಸಾ ಘಟಕಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸುವ ಪ್ರಕ್ರಿಯೆ ಈಗ ಯಾವ ಹಂತದಲ್ಲಿದೆ ಹಾಗೂ ಯಾವಾಗ ಮೇಲ್ದರ್ಜೆಗೇರಿಸಲಾಗುವುದು?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶು ಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಹಾಲಿ ಲಭ್ಯವಿರುವ ಮೇವು 10 ವಾರಗಳವರೆಗೆ ಸಾಕಾಗುತ್ತದೆ. ಜೂನ್ 2005 ರ ವೇಳೆಗೆ ಮೇವಿನ ಕೊರತೆ ಉಂಟಾಗುವ ಸಾಧ್ಯತೆ ಇದೆ.

ಆ) ಮೇವಿನ ಕೊರತೆಯನ್ನು ನಿವಾರಿಸಲು ಹಾವೇರಿ ಜಿಲ್ಲೆಗೆ ಬರಗಾಲ ಪರಿಹಾರ ನಿಧಿಯಲ್ಲಿ ಮೇವಿನ ಬೀಜದ ಕಿರುಪೊಟ್ಟಣಗಳನ್ನು ಖರೀದಿಸಿ ರೈತರಿಗೆ ಉಚಿತವಾಗಿ ವಿತರಿಸಲು 5.00 ಲಕ್ಷ ರೂಪಾಯಿಗಳ ಅನುದಾನ ಮಂಜೂರು ಮಾಡಲಾಗಿದೆ. ಸದ್ಯದಲ್ಲೆ ಮೇವಿನ ಬೀಜಗಳನ್ನು ಖರೀದಿಸಿ ನೀರಾವರಿ ಸೌಲಭ್ಯವಿರುವ ರೈತರಿಗೆ ಹಂಚಲು ಕ್ರಮ ಕೈಗೊಳ್ಳಲಾಗುವುದು. ಈ ಪ್ರಕಾರವಾಗಿ ಹಸಿರು ಮೇವನ್ನು ಬೆಳೆದು ಸಂಭವನೀಯ ಮೇವಿನ ಕೊರತೆಯನ್ನು ನಿವರಿಸಲಾಗುವುದು. ಅವಶ್ಯವೆನಿಸಿದಲ್ಲಿ ಖಿಲ್ಲಾರ್ ತಳಿ ಸಂವರ್ಧನಾ ಕೇಂದ್ರ, ಬಂಕಾಪುರದಲ್ಲಿ ಲಭ್ಯವಿರುವ ಹಾಗೂ ದಾಸ್ತಾನು ಮಾಡಿರುವ ಒಣಮೇವನ್ನು ಉಪಯೋಗಿಸಿಕೊಂಡು ಸಂಭವನೀಯ ಮೇವಿನ ಕೊರತೆಯನ್ನು ನಿವಾರಿಸಲಾಗುವುದು.

ಇ) ಕುಂಚೂರು ಮತ್ತು ಮಡ್ಲೂರು ಗ್ರಾಮಗಳಲ್ಲಿ ಯಾವುದೇ ಪಶುವೈದ್ಯಕೀಯ ಸಂಸ್ಥೆಗಳಿರುವುದಿಲ್ಲ. ಎತ್ತಿನಹಳ್ಳಿ ಎಂಕೆ.ಯಲ್ಲಿ ಕೃತಕ ಗರ್ಭಧಾರಣೆ ಕೇಂದ್ರವಿರುತ್ತದೆ. ಹಳ್ಳೂರಿನಲ್ಲಿ ಪಶುಚಿಕಿತ್ಸಾಲಯ ಇರುತ್ತದೆ. ಹಿಂದಿನ 3 ವರ್ಷಗಳಲ್ಲಿ ರಾಜ್ಯದಲ್ಲಿ 600 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. 147 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಸದ್ಯದಲ್ಲೇ ಮೇಲ್ದರ್ಜೆಗೇರಿಸಲಾಗುತ್ತದೆ. ರಾಜ್ಯದಲ್ಲಿ ಡಾ॥ ಡಿ.ಎಂ. ನಂಜುಡಪ್ಪ ಸಮಿತಿಯ ಪ್ರಾದೇಶಿಕ ಅಸಮತೋಲನಾವರದಿಯಲ್ಲಿ ಗುರುತಿಸಿರುವಬಹಳ ಹಿಂದುಳಿದ ತಾಲ್ಲೂಕುಗಳಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮವಿರುತ್ತದೆ. ಉಳಿದಂತೆ ಯಾವುದೇ ಹೊಸ ಪಶು ವೈದ್ಯಕೀಯ ಸಂಸ್ಥೆಗಳನ್ನು ತೆರೆಯುವ ಹಾಗೂ ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಪ್ರಸ್ತುತ ಇರುವುದಿಲ್ಲ.

ಈ) ಉಪ ಪ್ರಶ್ನೆ (ಇ)ಗೆ ನೀಡಿರುವ ಉತ್ತರವು ಇದಕ್ಕೂ ಅನ್ವಯಿಸುತ್ತದೆ.

2690 (3273) ಶ್ರೀ ಡಿ.ಆರ್. ಪಾಟೀಲ್ (ಗದಗ) :– ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2004–05ನೇ ಸಾಲಿನಲ್ಲಿ ಸಣ್ಣ ಕೈಗಾರಿಕೆಗಳಿಗೆ ಕೊಡಬೇಕಾಗಿದ್ದ ಸಹಾಯಧನ ಎಷ್ಟು;

ಆ) ಆ ಪೈಕಿ ಬಿಡುಗಡೆ ಮಾಡಿರುವ ಸಹಾಯಧನ ಎಷ್ಟು;

ಇ) ಬಾಕಿಯಿರುವ ಸಹಾಯಧನ ಎಷ್ಟು;